■ ಹನಿ



## ಚಾಂಪಿಯನ್ ಮರಿಯಾ

ಅಂತರ್ಜಾಲದಲ್ಲಿ ಹುಡುಕಿದರೆ ಈಕೆ ಟೆನಿಸ್ ಆಡುವುದಕ್ಕಿಂತ ಹೆಚ್ಚು ಬಿಕಿನಿ ಧರಿಸಿ ಬೀಚ್‌ನಲ್ಲಿ ಓಡಾಡುವ ಫೋಟೋಗಳೇ ಕಾಣಿಸುತ್ತವೆ! ಸುಂದರಿ, ಸೆಕ್ಸೀ ಎಂದೆಲ್ಲ ಕರೆಸಿಕೊಳ್ಳುವ ಮರಿಯಾ ಶೆರಪೋವಾ, ಟೆನಿಸ್ ಆಟದ ವಿಷಯಕ್ಕೆ ಬಂದರೆ ಅಷ್ಟೇ ಟಫ್ ಲೇಡಿ! ಇದೀಗ 2014ರ ಫ್ರೆಂಚ್ ಓಪನ್ ಪ್ರಶಸ್ತಿ ಗೆಲ್ಲುವ ಮೂಲಕ ಆವೆ ಮಣ್ಣಿನ ಅಂಗಣದಲ್ಲಿ ತನ್ನನ್ನು ಮೀರಿಸುವ ಆಟಗಾರ್ತಿಯರಿಲ್ಲ ಎನ್ನುವುದನ್ನು ಶೆರಪೋವಾ ಸಾಬೀತು ಪಡಿಸಿದ್ದಾರೆ. ರೋಲಾಂಡ್ ಗೆರೆಸ್‌ನಲ್ಲಿ ಈವರೆಗೆ ಒಟ್ಟು 50 ಪಂದ್ಯಗಳಲ್ಲಿ ಗೆಲ್ಲುವ ಮೂಲಕ ಪ್ಯಾರಿಸ್ ಈಕೆಯ ಅಚ್ಚುಮೆಚ್ಚಿನ ನಗರ ಎನ್ನುವುದೂ ಖಚಿತವಾಗಿದೆ. ಒಟ್ಟು ಐದು ಸಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ರಶ್ಯನ್ ಪ್ರಜೆ ಶೆರಪೋವಾ ಸದ್ಯಕ್ಕೆ ಅಮೆರಿಕ ನಿವಾಸಿ.

ಇನ್ನೂ 17ರ ಹರೆಯದಲ್ಲೇ 2004ರ ವಿಂಬಲ್ಡನ್ ಫೈನಲ್‌ನಲ್ಲಿ (ಆಗ ಎರಡು ಬಾರಿ ಚಾಂಪಿಯನ್ ಆಗಿದ್ದ) ಸೆರೆನಾ ವಿಲಿಯಮ್ಸ್ ಳನ್ನು ಸೋಲಿಸಿ ದೊಡ್ಡ ಮಟ್ಟದಲ್ಲಿ ಜಾಗತಿಕ ಟೆನಿಸಿಗೆ ದಾಂಗುಡಿಯಿಟ್ಟಾಕೆ ಈ ಮರಿಯಾ. ಈಗ ಈಕೆ ಗೆದ್ದಿರುವ ಒಟ್ಟು ಬಹುಮಾನದ ಮೊತ್ತ 30 ದಶಲಕ್ಷ ಡಾಲರ್ ದಾಟಿದೆ. ಸೆರೆನಾ ವಿಲಿಯಮ್ಸ್ ಬಿಟ್ಟರೆ ಟೆನಿಸ್‌ನಲ್ಲಿ ಅತ್ಯಧಿಕ ಬಹುಮಾನ ಮೊತ್ತ ಸಂಗ್ರಹಿಸಿದ ಮೊದಲ ಆಟಗಾರ್ತಿ ಮರಿಯಾ. ಒಟ್ಟು ಆಸ್ತಿಯ ಲೆಕ್ಕ ಹಾಕಿದರೆ ಈಕೆಯೇ ವಿಶ್ವದ ಅತ್ಯಂತ ಶ್ರೀಮಂತ ಅಥ್ಲೀಟ್.

ಎರಡು ಬಾರಿ ಭುಜದ ನೋವಿನಿಂದಾಗಿ ಅಂಗಣದಿಂದ ಹೊರಬಿದ್ದಿದ್ದ ಶೆರಪೋವಾ, 2013ರಲ್ಲಿ ಬಲಭುಜದ ಶಸ್ತ್ರಕ್ರಿಯೆಗೆ ಒಳಗಾದಾಗ, 'ಕಥೆ ಮುಗಿಯಿತು' ಎಂದವರಿದ್ದರು. ಆದರೆ ಕೋಚ್ ಸ್ಥಾನದಿಂದ ಥಾಮಸ್ ಹಾಗ್‌ಸ್ಟಡ್ ಮತ್ತು ಜಿಮ್ಮಿ ಕಾನರ್ಸ್‌ರನ್ನು ಸರಿಸಿ, ಗ್ರೆಗೋರ್ ಡಿಮಿಟ್ರೊವ್‌ರನ್ನು ಆಯ್ಕೆ ಮಾಡಿಕೊಂಡ ನಿರ್ಧಾರ ಸರಿ ಎನ್ನುವುದು ಈಗ ಗೊತ್ತಾಗಿದೆ. 2005ರಿಂದ 2012ರವರೆಗೆ ಐದು ಬಾರಿ ವಿಶ್ವ ಟೆನಿಸ್ ಶ್ರೇಯಾಂಕದಲ್ಲಿ 'ನಂಬರ್ ಒನ್' ಎನ್ನಿಸಿದ ಮರಿಯಾ ಸದ್ಯಕ್ಕೆ ಐದನೇ ಶ್ರೇಯಾಂಕದಲ್ಲಿದ್ದಾಳೆ. ಭುಜದ ನೋವಿನ ಹೊರತಾಗಿಯೂ ಚಾಂಪಿಯನ್ ಆಗಿರುವ ಮರಿಯಾ ವೃತ್ತಿಬದ್ಧತೆಯ ಬಗ್ಗೆ ಎರಡನೇ ಮಾತೇ ಇಲ್ಲ.

## ರಾಜಕಾರಣಿ ರೊಮಾರಿಯೊ



ಬ್ರೆಜಿಲ್ ಈ ಸಲದ ವಿಶ್ವಕಪ್ ಫುಟ್‌ಬಾಲ್ ಟ್ರೋಫಿ ಗೆಲ್ಲುತ್ತದೆಯೋ ಇಲ್ಲವೋ ಗೊತ್ತಿಲ್ಲ; ಆದರೆ ಬ್ರೆಜಿಲ್‌ನ ಒಂದು ಕಾಲದ ಸ್ಟಾರ್ ಆಟಗಾರ ರೊಮಾರಿಯೊ ಪ್ರಕಾರ, ಬ್ರೆಜಿಲ್ ಕ್ರೀಡಾಂಗಣದ ಹೊರಗೆ ಈಗಾಗಲೆ ಸೋತಿದೆ! 1994ರಲ್ಲಿ ಬ್ರೆಜಿಲ್ ವಿಶ್ವಕಪ್ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿ, ಟೂರ್ನಿಯ ಶ್ರೇಷ್ಠ ಆಟಗಾರ ಎಂದು ಚಿನ್ನದ ಫುಟ್‌ಬಾಲ್ ಗೆದ್ದಿದ್ದ ರೊಮಾರಿಯೊ ಈ ಸಲ ಬ್ರೆಜಿಲ್‌ನಲ್ಲಿ ವಿಶ್ವಕಪ್ ನಡೆಯುವುದಕ್ಕೆ ಕಡುವಿರೋಧಿ! 'ಬ್ರೆಜಿಲ್‌ನ ಆಸ್ಪತ್ರೆಗಳಲ್ಲಿ ಮಂಚಗಳಿಲ್ಲ, ರೋಗಿಗಳು ನೆಲದ ಮೇಲೆ ಮಲಗುತ್ತಾರೆ. 45 ಡಿಗ್ರಿ ಬಿಸಿಲಿನಲ್ಲಿ ಶಾಲೆಗೆ ಹೋಗುವ ಮಕ್ಕಳಿಗೆ ಶಾಲೆಯಲ್ಲಿ ಏರ್‌ಕಂಡಿಷನ್ ಇಲ್ಲ. ಮಧ್ಯಾಹ್ನದ ಊಟವೂ ಸಿಗುತ್ತಿಲ್ಲ. ಬ್ರೆಜಿಲ್ ಸರಕಾರ ಕೋಟ್ಯಾಂತರ ಡಾಲರ್‌ಗಳನ್ನು ಖರ್ಚು ಮಾಡಿ ಅನಗತ್ಯ ಸ್ಟೇಡಿಯಂಗಳನ್ನು ಕಟ್ಟುತ್ತಿದೆ' ಎಂದು ಅವರು ಬೆಂಕಿ ಉಗುಳಿದ್ದಾರೆ. ಈ ಸಲದ ವಿಶ್ವಕಪ್ ವಿರುದ್ಧ ನಡೆದ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿರುವ ರೊಮಾರಿಯೊ ಫಿಫಾ ಅಧ್ಯಕ್ಷರನ್ನು 'ಕಳ್ಳ' ಎಂದು ಬಹಿರಂಗವಾಗಿ ಜರೆದಿದ್ದಾರೆ.

ಸಾವಿರ ಗೋಲುಗಳನ್ನು ಹೊಡೆದಿರುವ ವಿಶ್ವ ಕೆಲವೇ ಆಟಗಾರರಲ್ಲಿ ರೊಮಾರಿಯೊ ಕೂಡಾ ಒಬ್ಬರು. ಬ್ರೆಜಿಲ್ ರಾಷ್ಟ್ರೀಯ ತಂಡದ ಪರ 70 ಪಂದ್ಯಗಳಲ್ಲಿ 55 ಗೋಲು ಹೊಡೆದು ಅತ್ಯಧಿಕ ಗೋಲಿಗರಲ್ಲಿ ಮೂರನೇ ಸ್ಥಾನ ಪಡೆದಿದ್ದಾರೆ. ಹಾಗೆಯೇ ಲೀಗ್ ಪಂದ್ಯಗಳಲ್ಲಿ 154 ಗೋಲ್ ಹೊಡೆದು ಎರಡನೇ ಸ್ಥಾನದಲ್ಲಿದ್ದಾರೆ. ಅದೆಲ್ಲ ಹಳೆಯ ಕಥೆ. 2010ರಲ್ಲಿ ಚುನಾವಣೆಗೆ ನಿಂತು ದೇಶದ ಕಾಂಗ್ರೆಸ್ ಪ್ರತಿನಿಧಿಯಾದ ರೊಮಾರಿಯೋ ಈಗ ಫುಲ್‌ಟೈಮ್ ಸೋಶಲಿಸ್ಟ್ ರಾಜಕಾರಣಿ. 171 ದಶಲಕ್ಷ ಪೌಂಡ್ ಸುರಿದು ನಿರ್ಮಿಸಿದ ಸ್ಟೇಡಿಯಂ ವಿಶ್ವಕಪ್ ಬಳಿಕ ಜೈಲಾಗಿ ಪರಿವರ್ತನೆಯಾಗಲಿದೆ ಎನ್ನುವುದು ಅವರ ಕಟುಟೀಕೆ. 'ಈಗ ಖರ್ಚು ಮಾಡಿದ್ದರಲ್ಲಿ ಶೇಕಡಾ 30ರಷ್ಟನ್ನು ಉಳಿಸಿದ್ದರೂ ದೇಶದಲ್ಲಿ ಆಸ್ಪತ್ರೆ, ಶಾಲೆಗಳಿಗೆ ಸಾಕಷ್ಟು ನೆರವಾಗುತ್ತಿತ್ತು. ಕಾಮಗಾರಿಯಲ್ಲಿ ಕೋಟ್ಯಾಂತರ ಡಾಲರ್ ಭ್ರಷ್ಟಾಚಾರ ನಡೆದಿದೆ' ಎನ್ನುವುದು ಅವರ ದೂರು. ಅದು ನಿಜವೇ ಇರಬಹುದು; ಆದರೆ ಫುಟ್‌ಬಾಲ್ ಜ್ವರದ ಸುಖದಲ್ಲಿ ಮೈಮರೆತಿರುವ ಬ್ರೆಜಿಲಿಗರಲ್ಲಿ ಯಾರೂ ರೊಮಾರಿಯೋಗೆ ಕ್ಯಾರೇ ಅನ್ನುತ್ತಿಲ್ಲ! ಒಂದು ಕಾಲದಲ್ಲಿ ಈತನನ್ನು ಹೊತ್ತು ಮೆರೆದ ಅಭಿಮಾನಿಗಳೇ ಈಗ ಮರೆತುಬಿಟ್ಟಿದ್ದಾರೆ!

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65